ಬಹಳ ಕಷ್ಟವಿರುವುದರಿಂದ 1971ರ G.O. ದಲ್ಲಿ ಬೇರೆ ರೀತಿಯ compensation ಕೊಡುವುದಕ್ಕೆ ಅವಕಾಶ ಇಲ್ಲದ ಕಾರಣದಿಂದ ಇದಕ್ಕೆ ತಿದ್ದುಪಡಿಯನ್ನು ಮಾಡಿ ಅದಕ್ಕೆ ಅಗತ್ಯವಿರುವಂಥ compensation ಕೊಡುವುದಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದಕ್ಕೆ ಸಂಬಂಧಪಟ್ಟವರಿಗೆ ನಾನು ಆದೇಶ ಮಾಡುತ್ತೇನೆ. ಆ ಕೆಲಸವನ್ನು ಮಾಡುವಾಗ ಶಾಸಕರ ಸಹಕಾರ ಕೂಡ ಬೇಕಾಗುತ್ತದೆ. ಆ ನಿಟ್ಟಿನಲ್ಲಿ ಜಮೀನು ಸಿಗದೆ ಆ ರೈತರಿಗೇನು ತೊಂದರೆಯಾಗಿದೆ, ಅವರಿಗೆ ಯಾವ ರೂಪದಲ್ಲಿ ಪರಿಹಾರ ಕೊಡಬೇಕೋ ಆ ಪರಿಹಾರ ಕೊಡುವುದಕ್ಕೆ ಕ್ರಮವನ್ನು ಜರುಗಿಸುತ್ತೇವೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ: ಮಂತ್ರಿಯವರು ತಮ್ಮ ಉತ್ತರದಲ್ಲಿ ಆದೇಶ ಸಂ.RD 126 LGH 1968, ದಿನಾಂಕ: 24-06-1971ರಲ್ಲಿ Order ಮಾಡಿದ್ದಾರೆನ್ನುವ ವಿಚಾರವನ್ನು ಹೇಳುತ್ತಾರೆ. ನನ್ನ ಪ್ರಶ್ನೆ ಏನೆಂದರೆ, ಎಷ್ಟು ತಿಂಗಳೊಳಗೆ ಪರಿಹಾರ ಕೊಡುವಂಥ ಕೆಲಸವಾಗುತ್ತದೆ? ಏಕೆಂದರೆ, ಜಮೀನು ಕಳೆದುಕೊಂಡವರು ಪ್ರತಿ ನಿತ್ಯ ನಮ್ಮನ್ನು ಯಾವಾಗ ಜಮೀನು ಕೊಡಿಸುತ್ತೀರಿ, ಹಣ ಕೊಡಿಸುತ್ತೀರಿ ಎಂದು ಕೇಳುತ್ತಾರೆ.

ಅಧ್ಯಕ್ಷರು: ಕೇಳಿದ್ದನ್ನೇ ಕೇಳಬೇಡಿ, ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ಇದು ಬಹಳ ಹಳೆಯ ಪ್ರಕರಣವಾಗಿರುವುದರಿಂದ ಇದನ್ನು ತ್ವರಿತಗತಿಯಲ್ಲಿ, ಆದಷ್ಟುಬೇಗನೆ ಅವರ ನಿರೀಕ್ಷೆ ಮಾಡಿದ್ದಕ್ಕಿಂತ ಬೇಗನೆ ಆ ಕೆಲಸವನ್ನು ಮಾಡಿಸುತ್ತೇನೆ.

ಐ.ಟಿ.ಐ. ಮರು ಪರೀಕ್ಷೆ ಕುರಿತು

155(1103) ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ ಉತ್ತರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಐ.ಟಿ.ಐ. ಪ್ರಶ್ನೆ ಪತ್ರಿಕೆ ಬಯಲಾದ ಕಾರಣ 150 ಪರೀಕ್ಷಾ ಕೇಂದ್ರಗಳಲ್ಲಿ 52,000 ವಿದ್ಯಾರ್ಥಿಗಳು ದಿನಾಂಕ: 05/10/2010 ರಂದು ಮರು ಪರೀಕ್ಷೆ ಬರೆದಿರುವ ಕುರಿತು ಹಾಗೂ DGET, New Delhi ಯಿಂದ ಈ ವಿಷಯಕ್ಕೆ ಕಾರಣಕರ್ತರಾದವರ ವಿರುದ್ಧ ಕ್ರಮ ಜರುಗಿಸಲು ಸೂಚಿಸಿ

ಬರೆದ ಪತ್ರವು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಾರಣ ಕರ್ತರು ಯಾರು ಹಾಗೂ ಅವರ ವಿರುದ್ಧ ಜರುಗಿಸಲಾದ ಕ್ರಮಗಳೇನು (ವಿವರ ಒದಗಿಸುವುದು) ;

ಆ) ಮರು ಪರೀಕ್ಷೆಗಾಗಿ ಚೇರಮನ್‌ಗಳ, ಕೇಂದ್ರ ಅಧೀಕ್ಷಕರ, ಕೊಠಡಿ ಮೇಲ್ವಿಚಾರಕರ, ಉತ್ತರ ಪತ್ರಿಕೆ ಮೌಲ್ಯಮಾಪಕರ, ನೇಮಕಾತಿ ಹಾಗೂ ಅವರುಗಳಿಗೆ ನೀಡುವ ಎಲ್ಲಾ ಭತ್ಯೆಗಳು ಮತ್ತು ಲೇಖನ ಸಾಮಗ್ರಿಗಳ ವೆಚ್ಚ ಇತ್ಯಾದಿ ಸರ್ಕಾರಿ ಸವಲತ್ತುಗಳಿಂದ ಸರ್ಕಾರಕ್ಕೆ ಉಂಟಾದ ನಷ್ಟವೆಷ್ಟು (ಸಂಪೂರ್ಣ ವಿವರ ಒದಗಿಸುವುದು) ;

ಇ) ಸರ್ಕಾರಕ್ಕಾದ ನಷ್ಟವನ್ನು ಯಾರಿಂದ ಮತ್ತು ಯಾವಾಗ ವಸೂಲು ಮಾಡಲಾಗುವುದು (ವಿವರ ಒದಗಿಸುವುದು) ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಹೌದು, ಐ.ಟಿ.ಐ. ಪ್ರಶ್ನೆ ಪತ್ರಿಕೆ ಬಯಲಾದ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹುಬ್ಬಳ್ಳಿಯ ಕಿರಿಯ ತರಬೇತಿ ಅಧಿಕಾರಿಗಳಾದ ಶ್ರೀ ಟಿ.ಸಿ. ಚೌಹಾಣ್ ಮತ್ತು ಎನ್.ಎಸ್. ಪಾಟೀಲ್ ಇವರು ಸದರಿ ವಿಷಯಕ್ಕೆ ಕಾರಣಕರ್ತರಾಗಿದ್ದು, ಇವರನ್ನು ದಿನಾಂಕ: 25–07–2010 ರಿಂದ ಅನ್ವಯಿಸುವಂತೆ ಅಮಾನತ್ತು ಗೊಳಿಸಲಾಗಿದೆ.

ಆ) ಮರು ಪರೀಕ್ಷೆಗಾಗಿ ಚೇರಮನ್‌ಗಳು, ಕೇಂದ್ರ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು,

ಮೌಲ್ಯಮಾಪಕರ ಸಂಭಾವನೆ	: ರೂ. 6,46,679
ಲೇಖನ ಸಾಮಗ್ರಿ	: ರೂ. 67,942
ಪ್ರಶ್ನೆ ಪತ್ರಿಕೆ ಮುದ್ರಣಾ ವೆಚ್ಚ	: ರೂ. 30,758
ಒಟ್ಟು ವೆಚ್ಚ	: ರೂ. 7,45,379

ಇ) ಸದರಿ ಪರೀಕ್ಷೆಯು ದೇಶದಾದ್ಯಂತ ಏಕಕಾಲದಲ್ಲಿ ಒಂದೇ ಮಾದರಿಯುಳ್ಳ ಪ್ರಶ್ನೆ ಪತ್ರಿಕೆಯ ಪರೀಕ್ಷೆಯಾಗಿದ್ದು ಡಿ.ಜಿ.ಇ.ಟಿ. ನಿಯಮಾವಳಿ ರೀತ್ಯ ಇಲಾಖಾ ವತಿಯಿಂದ ಸರ್ಕಾರದ ಗಮನಕ್ಕೆ ತಂದು ನಡೆಸಲಾಗಿದೆ. ವೆಚ್ಚವನ್ನು ಸರ್ಕಾರದಿಂದ ಭರಿಸಲಾಗುತ್ತದೆ. ಇಲಾಖಾ ವಿಚಾರಣೆಯ ನಂತರ ನಷ್ಟ ವಸೂಲಿ ಬಗ್ಗೆ ನಿರ್ಧರಿಸಲಾಗುವುದು.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಮಂತ್ರಿಯವರು ಕೊಟ್ಟಿರುವ ಉತ್ತರ convincing ಆಗಿಲ್ಲ. ಏಕೆಂದರೆ, ಹುಬ್ಬಳ್ಳಿಯಲ್ಲಿ 10th July paper leak ಆದಮೇಲೆ ಇಡೀ State ನಲ್ಲಿ Student Federation of India ದವರಿಂದ ಎಲ್ಲಾ district ನಲ್ಲಿ strike ಆಗಿದೆ. ತಾವು ಇಡೀ State ನಲ್ಲಿ ಒಂದು paper leak ಆದಮೇಲೆ complete 52,000 students ಗೆ ಮತ್ತೆ examination ಗೆ ತಾವು date fix ಮಾಡಿದ್ದಿರಿ. ಅಲ್ಲಿ students ಏನು ಹೇಳುತ್ತಿದ್ದಾರೆಂದರೆ, ಸರ್ Why you ask us again to write? They have gone to the High Court also against that policy decision. The Court has passed an order stating that we cannot help since it is the decision of the Government. Second question ಅನ್ನು ನಾನು ಕೇಳುತ್ತೇನೆ. ಏನೆಂದರೆ, you have suspended the persons for the leakage involving the Principal and the 2 JTO's. ನಿಮ್ಮ ಕಾಲದಲ್ಲಿ ಏನಾಗಿದೆ ಎಂದರೆ, every year ಶಿವಮೊಗ್ಗದಲ್ಲಿ ಇದೇ ತರಹ ಆಗಿದೆ, ಧಾರವಾಡದಲ್ಲಿ ಇದೇ ತರಹ ಆಗಿದೆ, ಸವಣೂರಿನಲ್ಲಿ ಇದೇ ತರಹ ಆಗಿದೆ ಮತ್ತೆ ಹುಬ್ಬಳ್ಳಿಯಲ್ಲಿ ಇದೇ ತರಹ ಆಗಿದೆ. Suspend ಆದ ಮೇಲೆ even after two months, ನೀವು ಇನ್ನೂ Enquiry Officer ಅನ್ನು fix ಮಾಡಿಲ್ಲ. ಕೇವಲ enquiry ಮಾಡುತ್ತಿದ್ದೇವೆ, suspend ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಇನ್ನೂ Enquiry Officer appoint ಮಾಡಿಲ್ಲ, ಅಷ್ಟರಲ್ಲೇ they have been re-instated. So, when the enquiry officer is going to be appointed? When you will hear the enquiry? That means ನಿಮಗೆ seriousness ಇಲ್ಲ.

Mr. Speaker: Please, you can ask only clarification. It is not a discussion. No. No. You ask only clarification. What is this?

ಶ್ರೀ ಖಮರುಲ್ ಇಸ್ಲಾಂ: ನಾನು clarification ಕೇಳುತ್ತಿದ್ದೇನೆ.

Mr. Speaker: It is not clarification.

ಶ್ರೀ ಖಮರುಲ್ ಇಸ್ಲಾಂ: Enquiry ಗೆ ಏಕೆ ಡಿಲೆ ಆಗಿದೆ?

ಅಧ್ಯಕ್ಷರು: That's all. How can you go on discussing? No. I won't allow this type. ಅವರು ಉತ್ತರ ಕೊಟ್ಟಿದ್ದಾರೆ, ನೀವು clarification ಕೇಳಿ. ನೀವು clarification ಕೇಳುವುದು ಬಿಟ್ಟು if you go on discussing. No.

Sri Qumarul Islam: Sir, Why the officer has not been appointed? Firstly, the enquiry is going on without the officer. Secondly, exchequer ಗೆ loss ಆಗಿದೆ. In your period it has become a common phenomenon.

(ಗೊಂದಲ)

ಅಧ್ಯಕ್ಷರು: No, No, the same thing you are repeating for the third time. ನೋಡಿ, ಮೂರನೇ ಬಾರಿ ಇದನ್ನೇ ಕೇಳುತ್ತಿದ್ದೀರಿ.

ಶ್ರೀ ಖಮರುಲ್ ಇಸ್ಲಾಂ: ಅವರು ನನ್ನ ಬಹಳ ಸ್ನೇಹಿತರು.

ಅಧ್ಯಕ್ಷರು: ಇರಬಹುದು. ನೀವು ಕೇಳಿದ್ದನ್ನೇ ಕೇಳಿದರೆ how to finish off?

ಶ್ರೀ ಖಮರುಲ್ ಇಸ್ಲಾಂ: ಈ ತರಹ ಜನ ಏನು ಹೇಳುತ್ತಿದ್ದಾರೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: No.

ಡಾ: ಹೆಚ್.ಸಿ. ಮಹದೇವಪ್ಪ: ಅವರ ಸ್ನೇಹಕ್ಕಾಗಿಯಾದರೂ ಅವರು ಮನಸೋತು ಅವರ ಮನಸ್ಸಿನ ಅಂತರಾಳದಲ್ಲಿ ಏನಿದೆ, ಆ ಉತ್ತರವನ್ನು ಕೊಡಲಿ.

ಅಧ್ಯಕ್ಷರು: ತನ್ವೀರ್ ಸೇಠ್‌ರವರೆ, ತಾವು ಕೇಳಿ.

ಶ್ರೀ ತನ್ವೀರ್ ಸೇಠ್: ಅವರು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಹೇಳಲಿ. ನಂತರ, ಅಗತ್ಯವಿದ್ದರೆ ನಾನು ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಇಬ್ಬರೂ ಸದಸ್ಯರು ಮಂತ್ರಿಯಾಗಿ ಕೆಲಸ ಮಾಡಿದಂಥವರು, ಈ ಪ್ರಶ್ನೆ ಕೇಳಿದ್ದಾರೆ. 150 ITI ಕೇಂದ್ರಗಳಲ್ಲಿ ಸುಮಾರು 52 ಸಾವಿರ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದಲ್ಲಿ ಪರೀಕ್ಷೆಯನ್ನು DGET

ಎಂದರೆ Director General of Employment and Training ನವರು ಮಾಡುತ್ತಾರೆ. ಅಲ್ಲಿಂದ ಸಮಗ್ರವಾಗಿ ಪ್ರಶ್ನೆ ಪತ್ರಿಕೆ ಬರುತ್ತದೆ. ಆ ಪ್ರಶ್ನೆ ಪತ್ರಿಕೆ ನಮಗೆ ಬಂದು ಜಿಲ್ಲಾಧಿಕಾರಿಗಳ custody ಗೆ ಹೋಗುತ್ತದೆ. ಜಿಲ್ಲಾಧಿಕಾರಿಗಳು treasury ಯಿಂದ ಆಯಾಯ ಕೇಂದ್ರಗಳಿಗೆ ಅವರೇ ಕಳುಹಿಸುವ ವಿಧಾನ ತಮಗೆ ಗೊತ್ತಿದೆ. ಹುಬ್ಬಳ್ಳಿ sub–urban area ದಲ್ಲಿ 5 ಕೇಂದ್ರಗಳಿವೆ. ಆ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತದೆ. ಅಲ್ಲಿ ಒಬ್ಬ JTO officer ಚೌಹಾಣ್ ಎನ್ನುವವರು, ಪಾಟೀಲ್ ಎನ್ನುವವರು ಒಬ್ಬರು ಮತ್ತು ಒಬ್ಬರು ಸಂಜೀವ್ ಲಮಾಣಿ ಎನ್ನುವ ತಲಾಟಿ, ರೆವಿನ್ಯೂ ಇಲಾಖೆ ಇವರುಗಳು ಸೇರಿ ಆ ಪರೀಕ್ಷೆಯ ದಿವಸದ ಹಿಂದಿನ ದಿವಸ ಅಂದರೆ ದಿ:25.7.2010ರಂದು ಏನು ಮಾಡಿದ್ದಾರೆಂದು ಪೋಲೀಸ್ information ಗೊತ್ತಾಗಿದೆ. ಅವರು ಇದ್ದ ಹೋಟೆಲ್ ಮೇಲೆ ಪೋಲೀಸ್‌ನವರು ರೇಡ್ ಮಾಡಿದ್ದಾರೆ. ರೇಡ್ ಮಾಡಿದಾಗ Electrical Electrician ಎನ್ನುವ ಒಂದು ಪ್ರಶ್ನೆ ಪತ್ರಿಕೆ, fitter ವೃತ್ತಿಯ ಕಾರ್ಯಾಗಾರ, ಲೆಕ್ಕಾಚಾರ, ವಿಜ್ಞಾನ ಈ ಪ್ರಶ್ನೆ ಪತ್ರಿಕೆಗಳು ಬಯಲಾಗಿದ್ದವು. ಆ ಪ್ರಶ್ನೆ ಪತ್ರಿಕೆಗಳು ಬಯಲಾದಾಗ ಅದನ್ನು tally ಮಾಡಿ ನೋಡಿದಾಗ ಅವು ಎರಡೂ ಸರಿ ಎಂದು ಕಾಣಿಸಿತು. ಇದು ನಮ್ಮ ರಾಜ್ಯದಲ್ಲಿ ಆಗಿದ್ದಲ್ಲ. ಇದು ತಮಿಳುನಾಡು. . . . . .

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಈ ವಿಷಯ ನಮ್ಮ ಭಾಗದ ಎಲ್ಲಾ ಜಿಲ್ಲೆಯವರಿಗೂ ಸಂಬಂಧಪಟ್ಟಿದ್ದಾಗಿದೆ. ಮಾನ್ಯ ಸದಸ್ಯರು action ತೆಗೆದುಕೊಳ್ಳಲು delay ಏಕೆ ಆಗುತ್ತಿದೆ ಎಂದು ಕೇಳುತ್ತಿದ್ದಾರೆ. ಸಂಬಂಧಪಟ್ಟವರನ್ನು suspend ಮಾಡಿದ್ದೀರಿ. ತನಿಖೆ ಆಗಲು ಇಷ್ಟು ವಿಳಂಬ ಏಕೆ ಎಂದು ಕೇಳುತ್ತಿದ್ದಾರೆ.

ಶೀ ಬಿ.ಎನ್. ಬಚ್ಚೇಗೌಡ : Police action ಮಾಡಿದ ಮೇಲೆ ನಾವು ಅವರನ್ನು ಅಮಾನತುಗೊಳಿಸಿದ್ದೇವೆ. ಮಾನ್ಯ ಸದಸ್ಯರು ಖರ್ಚಿನ ಬಗ್ಗೆ ಕೇಳಿದ್ದಾರೆ. ಸುಮಾರು 7,45,379 ರೂಪಾಯಿಗಳ ಖರ್ಚು ಆಗಿದೆ. ಮರು ಪರೀಕ್ಷೆಯಿಂದ 50 ಸಾವಿರ ವಿದ್ಯಾರ್ಥಿಗಳಿಗೆ ಆದ ತೊಂದರೆಯ ಬಗ್ಗೆ ನೀವು ಏಕೆ ಪ್ರಯತ್ನ ಪಡಲಿಲ್ಲ ಎಂದು ಕೇಳಿದರು. ಅದರ ಬಗ್ಗೆ ನಾವು repeated ಆಗಿ DGET ಗೆ ಕೇಳಿದೆವು. ಆದರೆ, DGET ಒಪ್ಪಲೇ ಇಲ್ಲ. ಇಲ್ಲ, ನೀವು 50 ಸಾವಿರ ವಿದ್ಯಾರ್ಥಿಗಳಿಗೂ ಕಡ್ಡಾಯವಾಗಿ ಪರೀಕ್ಷೆ ಮಾಡಲೇ ಬೇಕೆಂದು

ಹೇಳಿದರು. ನಮ್ಮನ್ನೂ ಭೇಟಿ ಮಾಡಿದರು, ನಾವೂ ಚರ್ಚೆ ಮಾಡಿದೆವು, ಪದೇ ಪದೇ ಕಾಗದ ಬರೆದೆವು, ಆದರೆ, ಅವರು ಒಪ್ಪಲೇ ಇಲ್ಲ. ಮಾಡಲೇ ಬೇಕು, ಎಲ್ಲರೂ appear ಆಗಬೇಕೆಂದು DGET ಯವರು ಆ ರೀತಿ ಸೂಚನೆ ನೀಡಿದರು. ಆ ರೀತಿ ಸೂಚನೆ ಕೊಟ್ಟ ಮೇಲೆ ನಾವು ದಿನಾಂಕ: 5.10.2010ರಂದು ಪರೀಕ್ಷೆ ಮಾಡಬೇಕಾಗಿ ಬಂತು. ಅದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ, ನಾನು ಒಪ್ಪಿಕೊಳ್ಳುತ್ತೇನೆ. ಆ ತೊಂದರೆ ಜೊತೆಗೆ ಸರ್ಕಾರದ Exchequerಗೆ ಆದ ನಷ್ಟ, details of remuneration of Chairman and other things ಮತ್ತು ನಮಗೆ ಬೇಕಾದಂಥ Superintendents, stationary, printings other things ಎಲ್ಲದಕ್ಕೆ ಎಷ್ಟು ಖರ್ಚಾಗಿದೆ ಎಂದು ಕೇಳಿದ್ದರು. ಅದಕ್ಕೆ, 7,45,379 ರೂಪಾಯಿ ಖರ್ಚಾಗಿದೆ. ಅದನ್ನು ಈಗ ಸರ್ಕಾರವೇ ಭರಿಸಿದೆ. ಇದನ್ನು ಸರ್ಕಾರವೇ ಕೊಟ್ಟಿದೆ. ಈ ವೆಚ್ಚವನ್ನು ಸರ್ಕಾರ ಭರಿಸಲಾಗಿ ಇಲಾಖಾ ವಿಚಾರಣೆಗೆ ಒಪ್ಪಿಸಿದ್ದೇವೆ. ಇಲಾಖಾ ವಿಚಾರಣೆ ನಂತರ ನಾವು ಮುಂದಿನ ಕ್ರಮ ಜರುಗಿಸುತ್ತೇವೆ. ಇದರಲ್ಲಿ ಎರಡು proceedings ಇದೆ. ಒಂದನೆಯದು, ನಮ್ಮ Departmental Enquiry and the other one is Police proceedings. ಈ ಎರಡೂ simultaneous ಆಗಿ ನಡೆಯುತ್ತದೆ. ಅವರ report ಬಂದ ನಂತರ ಏನು ಬೇಕೋ ಆ ಕ್ರಮ ಜರುಗಿಸುತ್ತೇವೆ.

ಶ್ರೀ ಖಮರುಲ್ ಇಸ್ಲಾಂ: Departmental Enquiry officer ಯಾರು? ನೀವು ಇನ್ನೂ Departmental Enquiry Officer ಅನ್ನು ನೇಮಿಸಿಲ್ಲ. ಕೇವಲ enquiry ಆಗಿ ಅವರು suspend ಆಗಿದ್ದಾರೆ. ಅವರ ಅಮಾನತ್ತು ಕೂಡ ವಾಪಸ್ಸು ಆಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಅವರನ್ನು ಅಮಾನತ್ತು ಮಾಡಿದ್ದೇವೆ. ಸಂಬಂಧಪಟ್ಟವರನ್ನು ದಿನಾಂಕ: 25.7.2010ರಂದು ಅಮಾನತ್ತು ಮಾಡಿದ್ದೇವೆ. ದಿನಾಂಕ: 8.11.2010ರಲ್ಲಿ show-cause notice ಕೊಟ್ಟಿದ್ದಾಯಿತು. Police ಮಾಹಿತಿ ಪಡೆಯಲು ವಿಳಂಬವಾದ ಕಾರಣ ವಿಚಾರಣೆ ಪ್ರಾರಂಭ ಮಾಡುವುದಕ್ಕೆ ತಡವಾಯಿತು. ಈಗ ವಿಚಾರಣೆ ಪ್ರಾರಂಭವಾಗಿದೆ. ದಿನಾಂಕ: 5.3.2011 ರಂದು ವಿಚಾರಣೆಯನ್ನು ಪ್ರಾರಂಭಿಸಲಾಗಿದೆ.

ಶ್ರೀ ಖಮರುಲ್ ಇಸ್ಲಾಂ: ವಿಚಾರಣೆ ಪ್ರಾರಂಭವಾಗಿದೆ ಮತ್ತು ಸಂಬಂಧಪಟ್ಟವರು ಸೇವೆಗೆ join ಆಗಿದ್ದಾರೆ. ಇನ್ನೂ Enquiry Officer appoint ಆಗಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಸಂಬಂಧಪಟ್ಟವರು suspension ನಲ್ಲಿದ್ದಾರೆ.

ಶ್ರೀ ತನ್ವೀರ್ ಸೇಠ್: ಅವರ suspension revoke ಆಗಿದೆ.

ಶ್ರೀ ಖಮರುಲ್ ಇಸ್ಲಾಂ: ಇನ್ನೂ Enquiry Officer appoint ಆಗಿಲ್ಲ. ತಾವು ಏಕೆ appoint ಮಾಡಿಲ್ಲ?

ಶ್ರೀ ಬಿ.ಎನ್. ಬಚ್ಚೇಗೌಡ: ಮಾಡಿದ್ದೇವೆ.

ಅಧ್ಯಕ್ಷರು: ಮಾಡಿದ್ದರೆ ಹೆಸರು ಹೇಳಿ.

ಶ್ರೀ ಮಾಲೀಕಯ್ಯ ಎ.ಗುತ್ತೇದಾರ್: ಮತ್ತೆ ಆ ಅಧಿಕಾರಿಗಳನ್ನು revoke ಮಾಡಿದರೆ ನೀವೇ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಸದಸ್ಯರಿಗೆ ಈ ಇಲಾಖೆ ಬಗ್ಗೆ ಗೊತ್ತಿದೆ. I have no objection. ಅವರಿಗೂ ಗೊತ್ತಿದೆ.

Sri Qamarul Islam : Why they have gone, they say DGET said, because Karnataka took the responsibility of the leakage, that is why they have conducted. They cannot, say that the paper setters are the DGET. They are bound to, do it. That is why government has made the Exchequer. It is not their fault. ನಾನು ಏನು ಹೇಳುತ್ತಿದ್ದೇನೆಂದರೆ students would not have gone. That district matter was there. Then only, if you had adjusted, it would have been a local matter. It would not been a state matter. ಇದು ನಿಮ್ಮ responsibility. Every year something goes on. ಶಿವಮೊಗ್ಗದಲ್ಲಿ ಲೋಕಾಯುಕ್ತರು raid ಮಾಡಿದ್ದಾರೆ. ಇದೇ ತರಹ ಹುಬ್ಬಳ್ಳಿಯಲ್ಲಿ same Principal ಮೇಲೆ raid ಆಗಿದೆ. ತಾವು ಮಂತ್ರಿ ಇದ್ದೀರಿ, ಶಕ್ತಿಶಾಲಿ ಮಂತ್ರಿ ಇದ್ದೀರಿ. ತಾವು ಸ್ವಲ್ಪ ವಿಚಾರಿಸಿ policy ಮಾಡಬೇಕು. ಕರ್ನಾಟಕದ ಹೆಸರಿಗೆ ತೊಂದರೆಯಾಗಬಾರದು. ಈ ತರಹ

ಈ phenomenon common ಆಗಿದ್ದರೆ Government ಗೆ ಜನರಿಗೆ, students ಗೆ ತೊಂದರೆಯಾಗುತ್ತದೆ. ಏನು ಕ್ರಮ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

ಶ್ರೀ ತನ್ವೀರ್ ಸೇಠ್: 2008ರಿಂದ ಈ ವರೆಗೆ ಪ್ರತಿವರ್ಷ ಪರೀಕ್ಷೆ ಸಂದರ್ಭದಲ್ಲಿ ಪ್ರಶ್ನೆ ಪತ್ರಿಕೆ ಬಯಲಾಗುತ್ತಿದೆ. ಲೋಕಾಯುಕ್ತರು 2–3 ಕಡೆ ನೇರವಾಗಿ ಹಿಡಿದು ಹಾಕಿದ್ದಾರೆ. ತದನಂತರ 2010ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಪರೀಕ್ಷೆಯಲ್ಲಿ ಇಬ್ಬರು JTOಗಳನ್ನು ಅದರಲ್ಲಿ ಭಾಗಿಯಾಗಿದ್ದಾರೆನ್ನುವ ಕಾರಣಕ್ಕಾಗಿ ಅಮಾನತ್ತು ಮಾಡಿದ್ದಾರೆ. ಇಲ್ಲಿಯವರೆಗೆ ಯಾವುದೇ ವಿಚಾರಣೆಗೆ ಸಮಿತಿ ರಚನೆ ಮಾಡದೆ ಈ ಎರಡೂ ಅಧಿಕಾರಿಗಳ suspension revoke ಮಾಡಿರುವ ಘಟನೆ ನಮ್ಮ ಮುಂದೆ ಇದೆ. ನಾವು ಮಾನ್ಯ ಮಂತ್ರಿಯವರಿಗೆ ಕೇಳಿರುವ ಪ್ರಶ್ನೆಗೆ ಸಂಪೂರ್ಣವಾದ ಉತ್ತರವನ್ನು ನಮ್ಮ ಮುಂದಿಟ್ಟಿಲ್ಲ. ದಿನಾಂಕ: 25.7.2010ರಂದು ಅಧಿಕಾರಿಗಳನ್ನು suspend ಮಾಡಿರುವ ವಿಚಾರ ಮಾತ್ರ ನಮ್ಮ ಗಮನಕ್ಕೆ ತಂದಿದ್ದಾರೆ. ತದನಂತರ ದಿನಾಂಕ: 15.12.2010ರಂದು ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದ ಆಯುಕ್ತರಿಂದ ಆ ಇಬ್ಬರೂ JTO ಗಳ suspension ಅನ್ನು revoke ಮಾಡಿದ್ದು ಅವರನ್ನು ಬೇರೆ ಘಟಕಕ್ಕೆ ನಿಯೋಜನೆ ಮಾಡಿರುವುದು ನಮ್ಮ ಮುಂದಿದೆ. ವಿದ್ಯಾರ್ಥಿ ಸಮುದಾಯಕ್ಕೆ ಪ್ರತಿ ವರ್ಷ ಇಂಥ ಕಹಿ ಅನುಭವವಾಗುತ್ತಿರುವುದರಿಂದ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ITI ಗಳು ನಡೆಯುತ್ತಿದ್ದು ಸಾಕಷ್ಟು ಬೇಡಿಕೆ ಇದೆ. ಇದೊಂದು ಕೈಗಾರಿಕಾ ಸಂಸ್ಥೆಯೆಂದು ನಾನಾದರೂ ಭಾವಿಸುತ್ತೇನೆ. ಏಕೆಂದರೆ, ಇವು ಕಾರ್ಮಿಕರನ್ನು ಸೃಷ್ಟಿ ಮಾಡುವ ಸಂಸ್ಥೆಗಳು. ಈ ಹಂತದಲ್ಲಿ ನಾವು ಅಂಥ ಭ್ರಷ್ಟಾಚಾರಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಬಯಲು ಮಾಡಿ ಪರೀಕ್ಷೆಗಳನ್ನು ಮಾಡುವುದರಿಂದ ಒಂದೊಂದು ದಿನವೂ ಇಂಥ ವಿದ್ಯಾರ್ಥಿಗಳಿಗೆ ಬಹಳ ಸೂಕ್ಷ್ಮ ಸಂದರ್ಭವಾಗಿರುತ್ತದೆ. ಅಂತಿಮ ಅಂಕ ಪಟ್ಟಿ ಬರುವುದಕ್ಕಿಂತ ಮುಂಚೆ ಉದ್ಯೋಗಾವಕಾಶ ಸಿಗುತ್ತದೆ. ಮರುಪರೀಕ್ಷೆಯಾಗುವುದರಿಂದ ಅನೇಕ ವಿದ್ಯಾರ್ಥಿಗಳಿಗೆ, ಸಾಕಷ್ಟು ಜನರಿಗೆ ತೊಂದರೆಯಾಗಿದೆ. ಸರ್ಕಾರಕ್ಕೆ ನಾನು ನೇರವಾಗಿ ಒತ್ತಾಯ ಮಾಡುವುದೇನೆಂದರೆ, ಇನ್ನು ಮುಂದಾದರೂ ಇಂಥದ್ದು ಆಗದ ರೀತಿ ಏನು ಕ್ರಮ ಜರುಗಿಸುತ್ತೀರಿ? DGET ಯಿಂದ ಬರುವಂಥ ಪ್ರಶ್ನೆ ಪತ್ರಿಕೆಗಳನ್ನು

ಇಲ್ಲಿಂದ circulate ಮಾಡುವ ಸಂದರ್ಭದಲ್ಲಿ ಅಲ್ಲಿಗೆ ಬೇಕಾಗಿರುವ ಜವಾಬ್ದಾರಿಯುತ ಅಧಿಕಾರಿಗಳನ್ನು ಇಟ್ಟುಕೊಂಡು ಇಂಥ ಕೆಲಸ ಮಾಡಿಸಿದಲ್ಲಿ ಮುಂದೆ ಇಂಥ ಅನಾಹುತವಾಗುವುದಿಲ್ಲ. ಹಾಗೆಯೇ, ಇದರಲ್ಲಿ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ, ಅಂಥವರ ಮೇಲೆ ಕಠಿಣ ಕ್ರಮ ಜರುಗಿಸಿದರೆ ಮಾತ್ರ ಇದನ್ನು ನಾವು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಅವರನ್ನು suspend ಮಾಡಿದ ಎರಡು ತಿಂಗಳಲ್ಲಿ ಮತ್ತೆ revoke ಮಾಡುವ ಕೆಲಸ ಮಾಡಿದರೆ ಒಂದು ರೀತಿಯಲ್ಲಿ ಹುಡುಗಾಟವಾಗುವ ಕೆಲಸವಾಗುತ್ತದೆ ಎಂದು ನಾನು ಮಾನ್ಯ ಮಂತ್ರಿಯವರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಸದಸ್ಯರು ಅಭಿಪ್ರಾಯ ಹೇಳಿದ್ದಾರೆ. ಇದರಲ್ಲಿ ಲೋಪವಿದೆ. ಏನಾಗುತ್ತದೆ ಎಂದರೆ, ರಾಷ್ಟ್ರಮಟ್ಟದಲ್ಲಿ ಈ ಪ್ರಶ್ನೆ ಪತ್ರಿಕೆಯನ್ನು ಕೊಡುತ್ತಾರೆ. ಅನೇಕ ಮೂಲಗಳಿಂದ ಅಂದರೆ fax ಮೂಲಕ, E–mail ಮೂಲಕ ಬರುತ್ತದೆ. ಇದೆಲ್ಲಾ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. 2008–09ರ ವಿಷಯ ಪ್ರಸ್ತಾಪ ಮಾಡಿದ್ದೀರಿ. ಲೋಕಾಯುಕ್ತರ ದಾಳಿಯಾಗಿದ್ದು, ಅದರಿಂದ ಸಿಕ್ಕಿಹಾಕಿಕೊಂಡಿರುವುದನ್ನು ಹೇಳಿದ್ದೀರಿ. ಕಠಿಣವಾದ ಬಿಗಿ ಕ್ರಮ ತೆಗೆದುಕೊಂಡು ಎಲ್ಲಾ ಮಾಡಿದ್ದೇವೆ. ಆದರೂ, ಈ ರೀತಿಯಾಗಿರುವುದನ್ನು ಹೌದು ಎಂದು ಒಪ್ಪಿಕೊಂಡಿದ್ದೇವೆ. ಇನ್ನು ಮುಂದೆ ಈ ರೀತಿ ಲೋಪ ಆಗದ ಹಾಗೆ ನೋಡಿಕೊಳ್ಳುವ ಕಾರ್ಯ ಮಾಡುತ್ತೇವೆ.

ಶ್ರಿ ಖಮರುಲ್ ಇಸ್ಲಾಂ: 24 hour ನಲ್ಲಿ suspend ಆಗಿದ್ದಾರೆ. ತಾವು strong ಆಗಿ ಕ್ರಮ ತೆಗೆದುಕೊಳ್ಳಿ.

ಹಿರೇಕೆರೂರು ತಾಲ್ಲೂಕಿನ ತುಂಗಾ ಮೇಲ್ದಂಡೆ ಯೋಜನೆಗೆ ರೈತರಿಂದ ಪಡೆದ ಭೂಮಿಗೆ ಪರಿಹಾರ

156(1062) ಶ್ರೀ ಪಾಟೀಲ ಬಿ.ಸಿ. (ಹಿರೇಕೆರೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ತುಂಗಾ ಮೇಲ್ದಂಡೆ ಯೋಜನೆಗೆ ರೈತರಿಂದ ಪಡೆದ ಭೂಮಿ ಎಷ್ಟು ;